ಸಿಸಿನಂ.231/2023
ಡಿಡಬ್ಲ್ಯೂ 1

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>**

ಸಿಸಿ ನಂ. 231/2023

ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀಮತಿ ಅಬೀದಾ ಬೇಗಮ್ |
| ಗಂಡನ ಹೆಸರು | : | ಸಯ್ಯದ್ ಹುಸೇನ್ ಬೇಗಮ್ |
| ವರ್ಷ | : | 46 ವರ್ಷ |
| ಉದ್ಯೋಗ | : | ಮದುವೆಯ ಮನೆಯಲ್ಲಿ ಛತ್ರ ಕೆಲಸ |
| ವಾಸ್ತವ್ಯ | : | ಗಾಂಧಿನಗರ, ಬಿಕೆ ರೋಡ್ , ಸಾಗರ |

ಸತ್ಯ ಪ್ರತಿಜ್ಞೆಯ ಮೇರೆಗೆ : ದಿನಾಂಕ 05-02-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಎಸ್ ಜೆ ಎನ್ ವಕೀಲರಿಂದ :</u>**

ನನ್ನ ತಂದೆಯ ಹೆಸರು ಹಸೇನ್ ಸಾಬ್ . ಫಿರ್ಯಾದುದಾರ ಗಣೇಶ ಶೇಖರ ನಾಯ್ಕ ನನಗೆ ಪರಿಚಯ ಇಲ್ಲ . ಅವರ ಜೊತೆ ನನ್ನ ಯಾವುದೇ ಹಣದ ವ್ಯವಹಾರ ಇಲ್ಲ . ಫಿರ್ಯಾದಿನಲ್ಲಿ ತೋರಿಸಿದ ವಿಳಾಸದಲ್ಲಿ ನಾನು ವಾಸವಾಗಿಲ್ಲ . ನಾನು ಫಿರ್ಯಾದುದಾರರ ಜೊತೆ ಯಾವುದೇ ಹಣದ ವ್ಯವಹಾರ ಮಾಡಿಲ್ಲ . ನಾನು ಅವರಿಗೆ ಯಾವುದೇ ಹಣವನ್ನು ಕೊಡಬೇಕಾಗಿಲ್ಲ . ನಾನು ಫಿರ್ಯಾದುದಾರರಿಗೆ ಯಾವುದೇ ಚೆಕ್ ನ್ನು ಕೊಟ್ಟಿಲ್ಲ . ನನ್ನ ಕಾರ್ಪೊರೇಶನ್ ಬ್ಯಾಂಕ್ ಅಕೌಂಟ್ ಜಿರೋ ಬ್ಯಾಲೆನ್ಸ ಇದ್ದುದರಿಂದ ಅಂದಾಜು 14 ವರ್ಷಗಳ ಹಿಂದೆ ಕ್ಯಾನ್ಸಲ್ ಆಗಿದೆ . ನನಗೆ ಯಾವುದೇ ನೋಟಿಸು ಬಂದಿಲ್ಲ. ಚೆಕ್ ನಲ್ಲಿರುವ ಸಹಿ ನನ್ನದ್ದಲ್ಲ . ನಿಪಿ-1 ಚೆಕ್ ನನ್ನದ್ದಲ್ಲ . ಅದರಲ್ಲಿರುವ ಸಹಿ ಕೂಡ ನನ್ನದ್ದಲ್ಲ . ನನಗೆ ಯಾವುದೇ ನೋಟಿಸು ಜಾರಿಯಾಗಿಲ್ಲ . ನಿಪಿ-5 ರಲ್ಲಿರುವ ಸಹಿ ನನ್ನದ್ದಲ್ಲ .

2. ಸಾಕ್ಷಿ ತನ್ನ ಆಧಾರ ಕಾರ್ಡಿನ ನೋಟರೈಜ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ –1 ಎಂದು, ತನ್ನ ಯಜಮಾನರ ಆಧಾರ ಕಾರ್ಡನ ನೋಟರೈಜ್ ಪ್ರತಿಯನ್ನು ಹಾಜರು ಪಡಿಸಿದ್ದು ನಿಡಿ –2 ಎಂದು, ಚುನಾವಣಾ ಗುರುತಿನ ಚೀಟಿಯ ನೋಟರೈಜ್ ಪ್ರತಿಯನ್ನು ನಿಡಿ–3 ಎಂದು, ಪಾನ ಕಾರ್ಡನ ನೋಟರೈಜ್ ಪ್ರತಿಯನ್ನು ನಿಡಿ –4 ಎಂದು, ರೇಶನ್ ಕಾರ್ಡನ ನೋಟರೈಜ್ ಪ್ರತಿಯನ್ನು ನಿಡಿ–5 ಎಂದು, ಹೆಚ್ ಡಿ ಎಫ್ ಸಿ ಬ್ಯಾಂಕಿನ ಪಾಸ ಬುಕ್ ನ್ನು ನಿಡಿ–6 ಎಂದು ಗುರುತಿಸಲಾಯಿತು .

(ಸಾಕ್ಷಿ ನಿಪಿ –1 ರಿಂದ ನಿಪಿ–5 ರ ದಾಖಲಾತಿಗಳ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ನೋಟರೈಜ್ ಪ್ರತಿಯೊಂದಿಗೆ ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು. )

ಆದ್ದರಿಂದ ಫಿರ್ಯಾದುದಾರರ ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

(ಫಿರ್ಯಾದುದಾರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.